Regd No B G 155 Sm 9—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಅನುಸಿಂಸ್ಥೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು – ಧರ್ಮಪ್ರಚಾರನಿರತ ಎಂ.ಎಸ್ ಕೃಷ್ಣರಾವ್ 2

ಪುಂಪಭೆ

ಮೈಸೂರು— ಮುಂದುನರಿದ ಅಧಿವೇಶದವು ಶಾ|| 12 ನೇ ಸೋಮವಾರ ಮಧ್ಯಾಹ್ನ 2 ಘಂಟೆಗೆ ನಡೆಯುದಾಗಿದೆ.

★

ಪತ್ರಕರ್ತರಿಗೆ ಸುವರ್ಣ ಪದಕ

ನವದೆಹಲಿ— ಲಂಡನ್ನಿನಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸ್ಟ್ಸ್ ಸಂಸ್ಥೆಯು ಪತ್ರಿಕಾ, ಪತ್ರಿಕೋದ್ಯಮಕ್ಕಾಗಿ ಪತ್ರ ವೃತ್ತಪತ್ರಿಕೆಗಳ ಮೂಲಭೂತ ಸ್ವಾತಂತ್ರ್ಯಕ್ಕಾಗಿ ಮಹತ್ವಪೂರ್ಣ ಸೇವೆ ಸಲ್ಲಿಸಿದ ಯಾವುದೇ ರಾಷ್ಟ್ರದ ವ್ಯಕ್ತಿಗಳಿಗೆ ಸುವರ್ಣ ಪದಕವೊಂದನ್ನು ಕೊಡುವುದನ್ನು 1963 ರಲ್ಲಿ ಪ್ರಾರಂಭಿಸಿತು : ಇನ್ನೊಂದು ಸುವರ್ಣ ಪದಕವನ್ನು ನೀಡುವಬಗ್ಗೆ ಆಯ್ಕೆ ಸಮಿತಿಯು ಈಗ ಹೆಸರುಗಳನ್ನು ಆಹ್ವಾನಿಸಿದೆ.

★

ಪಾದರಸ

ಬೊಂಬಾಯಿ— 75 ಪೌಂಡಿನ ಜಾಡಿ ಪಾದರಸದ ಬೆಲೆ ನಿನ್ನೆ 5000 ರೂಗಿಳಿಗೆ ಏರಿತ್ತು ; ಸ್ಥಾಪಕ ಕಡಮೆಯಾಗಿದ್ದು ಕೈಗಾರಿಗಗಳಿಂದ, ವಿದ್ಯಾಸಂಸ್ಥೆಗಳಿಂದ ಮತ್ತು ಕಲ್ಲುಕಟ್ಟು ಉದ್ಯೋಗಿಗಳಿಂದ ಕೇಳಿಕೆ ಹೆಚ್ಚಾಗಿತ್ತು.

★

ಷೇಕ್ ಅಬ್ದುಲ್ಲರು

ಉಲಕಮಂಡ್— ಅಧಿಕಾರಿಗಳಿಗೆ ತಾವು ಹಾಜರಿಲ್ಲದೆ, ತಮ್ಮ ವಕೀಲರೊಂದಿಗೆ ತಾವು ಮಾತನಾಡಲು ಷೇಕ್ ಅಬ್ದುಲ್ಲಾ ಅವರು ಏರ್ಪಾಟು ಮಾಡಿಕೊಂಡ ಕೋರಿಕೆಗೆ ಕೇಂದ್ರ ಸರ್ಕಾರ ಸಮ್ಮತಿಸಿಲ್ಲ

★

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪಕ್ಷ, ಜ್ಯೋತಿರ್ವಿದ್ವನ್ಮಣಿ
ಪಂಚಕೃಷ್ಣಜೋಯಿಸರಂಡ
10 ಶನಿವಾರ ದ್ವಾದಶಿ ಅನೂರಾಧ

ಮುನಿಸಿಪಲ್ ಹಾಸ್ಪಟಲ್

ಮೈಸೂರು ಸಿಟಿ ಮುನಿಸಿಪಲ್ ಪೂರ್ವ ಸ್ಟೂಡೆಂಟ್ಸ್ ಫೀಡಿಂಗ್ ಹಾಸ್ಪಟಲಿಗೆ ಮುನಿಸಿಪಲ್ ಹಾಸ್ಪಟಲ್) ಸೇರಲು ವಿದ್ಯಾರ್ಥಿಗಳಿಂದ ಶಾ || 15–7–65 ರ 5–30 ಘಂಟೆವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುತ್ತೆಂದೂ, ವಾಯಿದೆ ಕಳೆದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದೂ, ಅಧ್ಯಕ್ಷರು ಶ್ರೀ ಎಂ ವೆಂಕಟಲಿಂಗಯ್ಯನವರು ತಿಳಿಸಿದ್ದಾರೆ

●

ಹಂತಕಾಳಿ

ಬೊಂಬಾಯಿ— ಇಲ್ಲಿಯ ಕೈಲಿ ರೊಟ್ಟಿ ಮಾಡುವ 325 ರೊಟ್ಟಿ ಅಂಗಡಿಗಳು ಶಾ || 20 ರಿಂದು ಹಂತಕಾಳಿ ಆಚರಿಸಲಿವೆ : ಕಾರಣ, ಮುನಿಸಿಪಲ್ ಆರೋಗ್ಯ ಇಲಾಖೆಯವರು ಬೇಕರಿಯವರು ತಮ್ಮ ಎಲ್ಲಾ ತಯಾರಿಕೆಗೂ ಕಾಗದ ಸುತ್ತಿ, ಅವರ ಹೆಸರು ತಾರೀಖು ಹಾಕಬೇಕೆಂದು ಮಾಡಿರುವ ಆಜ್ಞೆಯನ್ನು ಪ್ರತಿಭಟಿಸಿ ಈ ಕಾರ್ಯ.

★

ಸಾಮೂಹಿಕ ರಾಜೀನಾಮೆ

ಪಾಟ್ನಾ— ವೈದ್ಯಕೀಯ ಮತ್ತು ಇಂಜಿನೀರಿಂಗು ನೌಕರಿ ಸಂಬಳದಂತೆ ತಮ್ಮ ಸಂಬಳವನ್ನೂ ತರಲು ಸರಕಾರ ವಿಫಲವಾದರೆ, ಬೀಹಾರು ಸಿವಿಲ್ ಸರ್ವಿಸಿನ 700 ಮಂದಿ ಸಾಮೂಹಿಕವಾಗಿ ರಾಜೀನಾಮೆ ಕೊಡಲು ನಿರ್ಧರಿಸಿದ್ದಾರೆ

★

ಹಿತೋಕ್ತಿ

ನಾಗಪುರ— ಪಾರ್ಲಿಮೆಂಟ ಸಭೆಯವರು ಹೋಟಲ್ಲು, ಹಾಸ್ಪಟಲ್ಲು ಸ್ಥಾಪಿಸಿ ಮತ್ತು ಮನರಂಜನೆಗೆ ಸ್ಥಳವೇರ್ಪಡಿಸಿ ತಮ್ಮ ಲಕ ತಮ ವಮಾನ ಹೆಚ್ಚಿಸಿಕೊಳ್ಳಬೇಕೆಂದು ಪ್ರಧಾನಿ ಶಾಸ್ತ್ರಿಗಳು ಅವರಿಗೆ ಕಿವಿಮಾತು ತಿಳಿಸಿದರು

●

ಪೃಥಿವೈಕಾದಶಿ ಪರಾಣ್ಣೆ ಪ್ರಯುಕ್ತ ನಾಳೆ 'ಸತ್ಯವಾದಿ' ರಜವಿದೆ.

ನ್ಯಾಯಮಂಡಲಿ ಮಧ್ಯಸ್ಥಿಕೆಯಲ್ಲಿ ಶಿಫಾರಸ್ಸು

ರಸ್ಯಸಭೆಯಲ್ಲಿ ಸ್ಥಾನ ಬೇಕಂತೆ

ಅಂಕೋಲ— ಇಲ್ಲಿಯ ನಾಸಿಕ ಸಮಾಜ ಸುಧಾರಕ ಸಂಘದವರು, ರಾಜ್ಯಸಭೆಯಲ್ಲಿ ತಮಗೊಂದು ಸ್ಥಾನಕೊಡಬೇಕೆಂದು ನೆಲ್ಲೂರಿನ ವೆಂಟಿಂಗಿಸಲ್ಲಿ ತಿಳುನಾಡು ಕ್ಷತ್ರಿಯರು ವಯಡಿರು ವಕೇಳಿಕೆಯನ್ನು ಅನುಮೋದಿಸಿದರು.

★

ಪುರಾತನ ಕಾಲದ್ದು

ಜಯಪುರ— ಭರತಪುರಕ್ಕೆ ನಾಲ್ಕು ಮೈಲಿ ದೂರದ ನೊಹದಲ್ಲಿ ಭೂಗರ್ಭ ಶೋಧನಾ ಕಾರ್ಯದಲ್ಲಿ ಕ್ರಿ ಪೂ 1300 ಕಾಲದ ಒಕ್ಕಣ್ಣಾದ ಪದಾರ್ಥಗಳು ಸಿಕ್ಕಿವೆ.

★

ಸಿನಿಮಾ

ಸಿನಿಮಾ ನೋಡುವುದರಲ್ಲಿ ಚೀನೀಯರೇ ಪ್ರಥಮ ಸ್ಥಾನ ; 1963 ರಲ್ಲಿ 4000 ವಿಲಿಯ ಮಂದಿ ನೋಡಿರುವರು — ರಷ್ಯನರು 3849 ವಿಲಿಯ ಮಂದಿ ನೋಡಿರುವರು — ಭಾರತದಲ್ಲಿ 1000 ವಿಲಿಯ ಮಂದಿ ನೋಡಿದರು.

★

ಆಂಗ್ಲಭಾಷೆ ಅರಿಯದವರು ಅಪದ್ಯಾವಂತರೇನು ?

ಕೆಲವೇ ದಿನಗಳ ಹಿಂದೆ ಮದರಾಸಿನಲ್ಲಿ ಸ್ವತಂತ್ರ ಪಕ್ಷದ ತಂಜಾವರ ಸಭೆ ನಡೆಯಿತು : ಅದಲ್ಲಿ ವೃದ್ಧ ಶ್ರೀ ರಾಜಗೋಪಾಲಾಚಾರಿಯವರು ಭಾಷಣವಿತ್ತರು : ತನ್ನ ಸ್ವತಂತ್ರ ಪ್ರಚಾರಾರ್ಥ ಅವರು ಬಹಳ ಉಪಾಯದಿಂದ ತಂಜಾವರ ಮನಸೆಳೆಕೊಳ್ಳುವ ರೀತಿಯಲ್ಲೇ ಮಾತಾಡಿದಿರುವರು. ಆದರೂ ಈಗಿನ ಕಾಲದ ತಂಜಾವರು ಹಾದಪ್ಪಗಳು ಅಥವಾ ಹಾದು ಒಪಪಣ್ಣಗಳಲ್ಲ ವಲ್ಲ : ಅವರಿಗೂ ಸೆರಿ – ತಪ್ಪುಗಳ ಅನುಭವ ಇದ್ದೇ ಇದೆ;

ತಂಜಾವರ ಮುಂದೆ ಅವರು ಕಾಂಗ್ರೆಸಿನ ಮೇಲೆ ತಮಗಿರುವ ದ್ವೇಷವ

ಕರ್ಣಕಠೋರವಾಗಿ ಹೇಳಿದ್ದಾರೆ: ಅವರು ಇಂಗ್ಲೀಷಿನಲ್ಲೇ ತಮ್ಮ ಮನದ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ: ಇಂಗ್ಲೀಷಿಗನಲ್ಲಿ ಮಾತಾಡುತ್ತಾ ಅವರು, ಇಂದು ನಿಜವಾಗಿ ಭಗ್ನವಿದ್ದಿರುವುದು ಇಂಗ್ಲೀಷ್-ಹಿಂದಿಗಳ ನಡುವೆ ಅಲ್ಲ ಅದು ಬದಲು ವಿದ್ಯೆ ವಿತ್ತು ಅವಿದ್ಯೆಗಳ ನಡುವೆ ಇದೆಯೆಂದು ಎತ್ತಿಹೇಳಿದ್ದಾರೆ.

ರಾಜಾಜಿಯವರ ಈ ಮಾತಿನ ಅರ್ಥವಾದರೂ ಏನು? ಆಂಗ್ಲಾಭಾಷೆ ಅರಿಯದವರು ಅವಿದ್ವಾಂಸರು ತಾನೆ? ಇದಕ್ಕೆ ಛೈಯ್ಯ – ಎನ್ನುವುದೇ ಅಥವಾ ವಿಶೇಷವಾದರೂ ಅನ್ನುವುದೇ? ಅವರು ಈ ಮಾತನ್ನು ಕೇಳಿದಾಗ ಈಗಿನ ಬ್ರಿಟಿಷ ಶಾಸನಪುರುಷ, ಕಾಂಗ್ರೆಸಿಗರು ನಡೆಸುತ್ತಿರುವ, ಸರಕಾರ ನಡೆದುಕೊಳ್ಳುತ್ತಿರುವ ರೀತಿ ಕ್ಷಣಕಾಲ 'ಇರಬಹುದು' ಎಂದು ಒಳಮನಸ್ಸು ಹೇಳುತ್ತದೆ: ಶಾಲೆಕಲಿತವರಲ್ಲಿ ಇಲ್ಲಿ ಭಾಷೆಗಳನ್ನು ಕಲಿಯಲು ಪಂಡಿತರು ಇರುತ್ತಾರೆ: ಹಾಗೆಯೇ ಎಂ ಎ ಮುಂತಾದ ಪದವೀಧರರಿರುತ್ತಾರೆ; ಇದರಲ್ಲಿ ಸಂಬಳ ಯಾರಿಗೆ ಜಾಸ್ತಿ ಗೊತ್ತೇ? ಆಂಗ್ಲಾ ಭಾಷೆಯು ಮೂಲಕ ಭಾರತೀಯ ಭಾಷೆಗಳಲ್ಲಿ ಡಿಗ್ರಿ ಪಡೆದವರಿಗೆ! ಭಾರತೀಯ ಭಾಷೆಯಲ್ಲೇ ಶಿರೋಮಣಿ, ವಿದ್ವತ್: ಪಂಡಿತ, ಅಚಾರ್ಯ ವಗೈರೆ ಪದವಿಗಳಿಲ್ಲಾ ಈ ಕಾಲದಲ್ಲಿ ನಡೆಯದ ನಾಣ್ಯಗಳೆಂತೆನೆ. ಹಾಗಾದರೆ ಅವರು ಅರ್ಧಒರ್ಧ ಅಳಿಲೇಕಾಯಿ ವಿದ್ಯಾವಂಶರು ತಾನೇ! ಆಂಗ್ಲಭಾಷೆ ಅರಿತಿರುವವರು ಮಾತ್ರ ವಿಯ್ಯಾಪಂಕರಲ್ಲವೇ? ಸಾಕಾರದ ದೋಷವನ್ನು ಮಾಜಿ ಗವರ್ನರುಜನರಲ್ಲರು ಸ್ಪಷ್ಟವಾಗಿ ಸೂಚಿಸಿದ್ದಾರೆ.

ಪ್ರತಿಯೊಂದು ವಿಷಯದಲ್ಲೂ ನಾವಿದನ್ನು ಕಾಳಬಹುದು: ಭಾರತೀಯ ವಸ್ತು ವೆಂದರೆ ಅದಂತ್ಯ ತಾಕತ್ತಾಂ! ಅದೇವಸ್ತು ಆಂಗ್ಲೇಯರಿಂದ ಬಂದಿದ್ದಲ್ಲಿ ಅದಕ್ಕೆ ಏಕಿಷ್ಟ ಮನ್ನಣೆ! ಏನು ಭ್ರಮೆ! ವೈದ್ಯರ ವಿಷಯದಲ್ಲೂ ಹಾಗೆಯೇ: ಭಾರತೀಯ ಅಥವಾ ಆಯುರ್ವೇದ ಇಂದು ಅನಾಡಿ ವೈದ್ಯಕೀಯವಿದೆ, ಆಂಗ್ಲಾಭಾಷೆಯಲ್ಲಿ ಕಲಿತವೈದ್ಯಕೀಯ ಹಾಗೂ ಪಡೆದ ಡಿಗ್ರಿ ಮಾತ್ರ ಉಚ್ಚ ತರದದ್ದಿದೆ! ಹುತ್ತಲಗಿಡ ಮದ್ದಲ್ಲ ರಾಜಾಜಿಯವರಿಗೆ!

ಇದಕ್ಕೆಲ್ಲಾ ಎಂದು ಕೊನೆ. — ಶಿವಶಂಕರ್

*

ಸಮಯೋಚಿತ ಸೂಕ್ತಿಗಳು

ದುರ್ಬಲನು ಸಾಧುಜಾತಿಗುತ್ತಾನೆ; ನಿರ್ಧನನು ಬ್ರಹ್ಮಚಾರಿಯಾಗುತ್ತಾನೆ; ರೋಗಿಯು ದೇವಭಕ್ತನಾಗುತ್ತಾನೆ; ಮುದುಕಿಯು ಪತಿವ್ರತೆಯೆನಿಸುತ್ತಾಳೆ.

o o o

ಉದ್ಯೋಗಶೀಲನಾದ ಧೀರ ಪುರುಷನನ್ನು ಭಾಗ್ಯವು ಆಶ್ರಯಿಸುತ್ತದೆ ದೈವವು ಪ್ರಧಾನವೆಂದು ಮೂಢರು ಮಾತ್ರ ಹೇಳುತ್ತಾರೆ; ದೈವವನ್ನು ಬಿಟ್ಟು ಶಸ್ತ್ರ ಬಲದಿಂದಲೇ ಪುರುಷರು ಯೋಗ್ಯವಾದ ಕಾರ್ಯವನ್ನು ಮಾಡಬೇಕು: ಯತ್ನವನ್ನು ಮಾಡಿದ ಬಳಿಕ ಒಂದು ವೇಳೆ ಕಾರ್ಯ ಸಿದ್ಧಿಸದಿದ್ದರೂ (ನಿನ್ನ) ದೋಷವೇನು?



ಗೋರಕ್ಷಣೆ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ಸ್ ದಿಗ್ವಿಜಯ 8 ನೇ ವಾರ

50 ನೇ ಆನಂದದ ದಿನ

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ

ಜಾನ್‌ವರ್ JANWAR

ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,
ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ

ಆಪೆರ— ಜನಪ್ರಿಯ 3 ನೇ ವಾರ

ಮಾಡರ್ನ್ ಥಿಯೇಟರ್ಸ್‌ನವರ 100 ನೇ ಅಮೋಘ ತಮಿಳು ಚಿತ್ರ

ವಲ್ಲವನುಕು ವಲ್ಲವನ್

ನಟವರ್ಗ— ಜಮುನಾ ಗಣೇಶ್, ಸಾವಿತ್ರಿ, ಅಶೋಕ್, ತಂಗವೇಲು
ಮುತ್ತುಲಕ್ಷ್ಮಿ, ಮನೋರಮ

ಸುಧಾ

ಉತ್ತಮ ಟಾನಿಕ್

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯುಳ್ಳದಾಗಿದೆ

Help The GORAKSHANA

.... ಗೋರಕ್ಷಣೆಗೆ ಬೆಂಬಲ ನೀಡಿ ....

ಕರ್ನಾಟಕದಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ: ವಾರ್ಷಿಕ ಚಂದ 50 ನೈಸೆ
ಸಹಾಯಕರು ರೂ 10 ಮತ್ತು ಬೆಂಬಲಿಗರು ರೂ 25(ಒಂದು ಶಾಶ್ವತಾದಾಯ):
ವಿಳಾಸ— ಗೋರಕ್ಷಣ ಆಫೀಸು ಶಾಖಪುರಾಜಪುರಂ ಮೈಸೂರು 4

Edited, Printed & Published by Dharma prachara nirathe M S Krisbna Rao) Proprietor) at the Satyavadi Press Chamarajapuram, Mysore 4